(ಗೊಂದಲ)

ಅಧ್ಯಕ್ಷರು : ಅವರೇನು ಹೇಳಿದರೆಂದು ಕೇಳಿದೆ ಅಷ್ಟೇ, No. I have not allowed him. ರಾಮಯ್ಯನವರಿಗೆ ನಾನು, ಮಧ್ಯಾಹ್ನ, ಸಂಜೆಯೊಳಗೆ ನಿಮ್ಮ ವಿಷಯವನ್ನು ತೆಗೆದುಕೊಳ್ಳೋಣವೆಂದು ಹೇಳಿದೆ.

(ಗೊಂದಲ)

MR. SPEAKER: Don't take down.

(ಗೊಂದಲ)

MR. SPEAKER: I am not allowing anybody to speak.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು 15 ನಿಮಿಷ ಕಾಲ ಮುಂದೂಡುತ್ತಿದ್ದೇನೆ.

(ಸದನವು ಬೆಳಿಗ್ಗೆ 11.34 ಗಂಟೆಗೆ ಮುಂದೂಡಲ್ಪಟ್ಟು, ಪುನಃ 15 ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

ಸದನವು ಮತ್ತೆ 12-30ಕ್ಕೆ ಸಮಾವೇಶಗೊಂಡಿತು.

(ಸಭಾಧ್ಯಕ್ಷರು (ಶ್ರೀ ಎಂ.ವಿ.ವೆಂಕಟಪ್ಪನವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.)

9. ಶಾಸನ ರಚನೆ

ವಿಷಯ: 2002ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕದ ಮೇಲಿನ ಚರ್ಚೆ.

ಅಧ್ಯಕ್ಷರು : ಮಾನ್ಯ ಸುರೇಶ್ ಕುಮಾರ್ ಮಾತನಾಡುವುದಕ್ಕೆ ಮೊದಲು, ನಾವು ಒಳಗಡೆ ಒಂದು ಅಂಡರ್‌ಸ್ಟಾಂಡಿಂಗ್‌ಗೆ ಬಂದಿದ್ದೇವೆ. ಅದರ ಪ್ರಕಾರ ಸುರೇಶ್ ಕುಮಾರ್ ರವರು ಮಾತನಾಡುತ್ತಾರೆ. ನಂತರ ಮುಂದಿನ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆ. Now BDA Bill. We must appreciate the boldness of the Commissioner who is making BDA to earn of rupees crores, We must appreciate. Such officers should be given encouragement. ನೂರಾರು ಕೋಟಿ ರೂ.ಗಳನ್ನು ಬಿ.ಡಿ.ಎ. ತಂದುಕೊಡುತ್ತದೆ. ಅಪ್ರೀಷಿಯೇಟ್ ಮಾಡಬೇಕೆಂದು ನಾನೇ ಮೆನ್‌ಷನ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ತಾವು ಪ್ರಸ್ತಾಪ ಮಾಡಿದಿರಿ ಎಂದು ನಾನು ಹೇಳುತ್ತಿದ್ದೇನೆ. ಬಿ.ಡಿ.ಎ. ಕಮೀಷನರ್ ಈ ಅನ್ ಆಥರೈಸ್ಡ್ ಕಟ್ಟಡಗಳ ಬಗ್ಗೆ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಮೊನ್ನೆ ನಾನು ಡೆಲ್ಲಿಗೆ ಹೋದಂಥ ಸಂದರ್ಭದಲ್ಲಿ, ಕೆಲವು ಪ್ರಮುಖರು ಕೇಳಿದರು. ಬೆಂಗಳೂರಿನಲ್ಲಿ ಅನ್ ಆಥರೈಸ್ಡ್ ಬಗ್ಗೆ ಹೇಗೆ ಎಂದರು. ಬೆಂಗಳೂರಿನಲ್ಲಿ ಬಹಳ ಚೆನ್ನಾಗಿ ನಡೆಯುತ್ತಿದೆ, ಇದೆಲ್ಲಾ ಕಮೀಷನರದ್ದು ಎಂದು ಹೇಳಿದೆ. ಅದಕ್ಕೆ, ಅವರೂ ಅಪ್ರೀಷಿಯೇಟ್ ಮಾಡಿದರು. ಮತ್ತೊಂದು ಕಾಷನ್ ತೆಗೆದುಕೊಳ್ಳುವಂಥಾದ್ದು, ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಆದಮೇಲೆ ಅದನ್ನು ಡೆಮಾಲಿಷ್ ಮಾಡುವುದು, ಒಂದು ಹಂತ. ಯಾರು ಇಲ್ಲೀಗಲ್ ಮಾಡುತ್ತಾರೆ, ಅವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಒಂದು. ಮತ್ತೊಂದು ಆ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಬರದ ರೀತಿಯಲ್ಲಿ ಪ್ರಿವೆಂಟಿವ್ ಮೆಷರ್ಸ್

ತೆಗೆದುಕೊಳ್ಳಬೇಕು. ಏಕೆಂದರೆ, ಕೋಟ್ಯಾಂತರ ರೂಪಾಯಿ ಇನ್‌ವೆಸ್ಟ್‌ಮೆಂಟ್ ಮಾಡಿರುತ್ತಾರೆ. ಅವರು ಇಲ್ಲೀಗಲ್ ಮಾಡಿದ್ದರೆ, ಹೋಗಲಿ. ಅದಕ್ಕಿಂತ ಮುಂಚೆ, ಯಾರು ನಮ್ಮ ಅಫಿಷಿಯಲ್ ಇದ್ದಾರೆ, ಅವರು ಕಾಶಸ್ ಆಗಿ ಇರಬೇಕು. ರೆವಿನ್ಯೂ ಲ್ಯಾಂಡ್ ಇರಬಹುದು ಅಥವಾ ಗವರ್ನಮೆಂಟ್ ಜಾಗ ಇರಬಹುದು, ಬಿ.ಡಿ.ಎ. ಜಾಗ ಇರಬಹುದು ಅಲ್ಲಿ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಮಾಡುವಂಥಾದ್ದು, ಪ್ರಿಲಿಮಿನರಿ ಹಂತದಲ್ಲಿ ತಡೆ ಹಿಡಿಯುವಂಥಾದ್ದು ಆಗಬೇಕು. ಪಾಯ ಹಾಕುವ ಸಂದರ್ಭದಲ್ಲೇ ಕೆಡವುವಂಥಾದ್ದು ಆಗಬೇಕು. ಕಟ್ಟಡ ಬಂದಮೇಲೆ ಡೆಮಾಲಿಷನ್ ಮಾಡುವುದು, ಅಲ್ಲಿ ನಿಜವಾಗಿಯೂ ಹೇಳಬೇಕೆಂದರೆ ಅದು ನ್ಯಾಷನಲ್ ವೇಸ್ಟ್. ಅದರ ಬಗ್ಗೆಯೂ ಪ್ರಿಕಾಷನ್ಸ್ ತೆಗೆದುಕೊಳ್ಳಬೇಕು.

+ ಶ್ರೀ ಎಸ್ ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೇ, ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ್ದು, ಅದರ ಕಾಯಿದೆಗೆ ಸಂಬಂಧಪಟ್ಟ ಹಾಗೆ ಕೆಲವು ತಿದ್ದುಪಡಿಗಳನ್ನು ಸದನದಲ್ಲಿ ಇವತ್ತು ಮಾನ್ಯ ಆರೋಗ್ಯ ಸಚಿವರು ತಿದ್ದುಪಡಿ ಮಂಡಿಸಿದ್ದಾರೆ. ಅದು ಯಾವ ರೀತಿ ಆರೋಗ್ಯ ಸಚಿವರಿಗೆ ಇದು ಸಂಬಂಧ ಎಂಬುದು ನನಗೆ ತಿಳಿದಿಲ್ಲ. ತೊಂದರೆಯಿಲ್ಲ. ಯಾವುದೇ ಕಾಯಿದೆಗೆ ತಿದ್ದುಪಡಿಬರಬೇಕಾದರೆ ಸ್ವಲ್ಪ ವಿವೇಚನೆ ಇರಬೇಕು. ಹಿಂದಿನ ಕಾಯಿದೆಯಿಂದ ನಾಗರೀಕರಿಗೆ ಏನಾದರೂ ತೊಂದರೆ ಆಗಿತ್ತೇ ಅಥವಾ ಅನ್ಯಾಯ ಆಗಿತ್ತೇ? ಅದರ ಬಗ್ಗೆ ಸಾರ್ವಜನಿಕವಾದ ಧ್ವನಿ ಎದ್ದಿತ್ತೇ? ಅದರ ಹಿನ್ನೆಲ್ಲೆಯಲ್ಲಿ ಒಂದು ತಿದ್ದುಪಡಿ ತರುವುದು ಸರ್ವೇಸಾಮಾನ್ಯ. ತಿದ್ದುಪಡಿ ಅಂದರೆ ಅರ್ಥ ಅದು. To amend certain things which were not foreseen then" ಆ ರೀತಿ ತಿದ್ದುಪಡಿ ತರುವುದು. ಆದರೆ, ಇಲ್ಲಿ ತಿದ್ದುಪಡಿ ತರುತ್ತಾ ಇರುವುದು ನಾಗರೀಕರಿಗೆ ಆಗಿರತಕ್ಕ ಅನ್ಯಾಯವನ್ನ ಸರಿಪಡಿಸುವುದಕ್ಕಲ್ಲ. ಅದರ ಬದಲಿಗೆ ದೇಶದ ಸರ್ವೋಚ್ಚ ನ್ಯಾಯಾಲಯ ಒಂದು ಸ್ಪಷ್ಟ ತೀರ್ಪನ್ನು ಕೊಟ್ಟಮೇಲೆ, ಅದರಿಂದ ಬಿ.ಡಿ.ಎ.ಗೆ. ಉಂಟಾಗಿರುವ ಅನ್ಯಾಯವನ್ನು ಸರಿಪಡಿಸುವುದಕ್ಕೋಸ್ಕರ, ದೇಶದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಒಪ್ಪಿಕೊಳ್ಳುವ ಬದಲು ಮತ್ತು ಒಪ್ಪಿಕೊಂಡು ಇಂಪ್ಲಿಮೆಂಟ್ ಮಾಡುವ ಬದಲು, ನಾವು ಅಮೆಂಡ್‌ಮೆಂಟಿಗೇ ಶರಣು ಹೋಗುತ್ತೇವೆ, ಕಾಯಿದೆಯನ್ನೇ ತಿದ್ದುಪಡಿ ಮಾಡುತ್ತೇವೆಂದು, ಇವತ್ತೇನು ತಿದ್ದುಪಡಿ ತಂದಿದ್ದಾರೆ. ಇದು ಒಂದು ರೀತಿ ನನಗನಿಸುವುದು, ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ನಿಮಗೆ ಇರುವ ತಿರಸ್ಕಾರ. ಜೊತೆಗೆ ಹಿಂದೆ ಇದ್ದ ಆಕ್ಟ್‌ನಲ್ಲಿ ಇಲ್ಲದೇ ಇರುವ ಸಂಗತಿಯನ್ನು ನೀವು ಮಾಡಿರುವುದರಿಂದ, ನಾಗರೀಕರಿಗೆ ಏನು ಅನ್ಯಾಯವಾಗಿತ್ತು ಅದರ ಬಗ್ಗೆ ತಮ್ಮ ಸಂವೇದನಾ ಹೀನತೆಯ ಒಂದು ಸ್ಪಷ್ಟ ಚಿತ್ರಣ. ಅದಕ್ಕೋಸ್ಕರ ಇವತ್ತು ಈ ತಿದ್ದುಪಡಿ ತಂದಿದ್ದೀರಿ. ಈ ತಿದ್ದುಪಡಿ ನೋಡಿದಾಗ, ಒಂದು ರೀತಿ, 15-17 ವರ್ಷಗಳ ಹಿಂದೆ ಶಹಬಾನ್ ಕೇಸ್‌ನಲ್ಲಿ ಏನಾಗಿತ್ತು, ಸರ್ವೋಚ್ಚ ನ್ಯಾಯಾಲಯ ತೀರ್ಪನ್ನು ಕೊಟ್ಟಮೇಲೆ ಒಂದು ಅಮೆಂಡ್‌ಮೆಂಟ್ ಏನು ತಂದಿರಿ. ಅದರದ್ದೇ ಬೇರೆ ಸ್ವರೂಪದಲ್ಲಿ ಪುನರಾವರ್ತನೆ ಈ ಸದನದಲ್ಲಿ ಇವೊತ್ತು ಆಗುತ್ತಾ ಇದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪು ಅವರು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಅದಕ್ಕೋಸ್ಕರ ತಿದ್ದುಪಡಿ ತರುವುದು. ಈ ತಿದ್ದುಪಡಿಯನ್ನು ಏತಕ್ಕೆ ತಂದಿದ್ದಾರೆ? ಅವರು ಹೇಳುವ ಪ್ರಕಾರ The Bangalore Development Authority wad levying and collecting property tax on lands and buildings on the strength of a notification. ಒಂದು ನೋಟೀಫಿಕೇಷನ್ ಕೊಟ್ಟು ಅದು ಎಷ್ಟು ಸ್ಟ್ರಾಂಗ್

ಎಂದರೆ, ಆ ನೋಟಿಫಿಕೇಷನ್‌ನ ಆಧಾರದ ಮೇಲೆ ಅವರು ಟ್ಯಾಕ್ಸ್ ಕಲೆಕ್ಟ್ ಮಾಡುತ್ತಾ ಇದ್ದರು. on lands and buildings issued under Section of the Bangalore Development Authority Act, 1976. Levy and collection of tax was challenged before the high Court in Writ Petition No. so and so.

ಒಬ್ಬರು ಚಾಲೇಂಜ್ ಮಾಡಿದರು. ಈ ರೀತಿ ಟ್ಯಾಕ್ಸ್‌ನ್ನು ಕಲೆಕ್ಟ್ ಮಾಡುವುದಕ್ಕೆ ಆಗುವುದಿಲ್ಲ. ನೋಟಿಫಿಕೇಷನ್‌ನ ಆಧಾರದ ಮೇಲೆ ಎಂದು. ಬಹಳ ಸ್ವಾರಸ್ಯಕರ. The Single Judge of the Court held that BDA has no power to levy and collect property tax as the BDA Act has not authorised the BDA to levy and collect such tax. ಎಂದು ಹೇಳಿದ್ದಾರೆ. ಅದರಿಂದಾಗಿ ಬಿ.ಡಿ.ಎ. ಆಕ್ಟ್‌ನಲ್ಲಿ ನಿಮಗೆ ಅಧಿಕಾರವೇ ಇಲ್ಲ. ಅಧಿಕಾರ ಇಲ್ಲದೇ ಇರುವ ಕಡೆಯಲ್ಲಿ ನೀವು ಟ್ಯಾಕ್ಸ್ ಕಲೆಕ್ಟ್ ಮಾಡಿರುವುದು ತಪ್ಪು ಎಂದು ಸಿಂಗಲ್ ಜಡ್ಜ್‌ಮೆಂಟ್‌ನವರು ತೀರ್ಪು ಕೊಟ್ಟರು. ಎರಡನೇದಾಗಿ ಏನು ಹೇಳಿದರು. "the property tax is service related and as the BDA has not rendered any service to the property owners, it is not legally permissible to levy such tax." ಜೊತೆಗೆ ಮೂರನೇದಾಗಿ ಇದು ಬಹಳ ಇಂಪಾರ್ಟೆಂಟ್ ಆಗಿದೆ. "the tax collected has to be refunded." ಇದನ್ನು ಸುಮಾರು 1990-91ನೇ ಇಸವಿಯಲ್ಲಿ ವಾಪಸ್ಸು ಕೊಟ್ಟು ಬಿಡಿ ಎಂದು ಜಡ್ಜ್‌ಮೆಂಟ್ ಕೊಟ್ಟರು. ಅವೊತ್ತೇ ವಾಪಸ್ ಕೊಟ್ಟಿದ್ದಿದ್ದರೆ ಬಿ.ಡಿ.ಎ. ಚೆನ್ನಾಗಿರುತ್ತಾ ಇತ್ತು. ಹಾಗೆ ಮಾಡಲಿಲ್ಲ. ನಾಗರೀಕರಿಗೆ ಅನುಕೂಲವಾಗಿ ಬಿಟ್ಟರೆ? ನಮ್ಮ ಮೇಲೆ ನಾಗರೀಕರು ಗೆದ್ದರೆ ಹೇಗೆ? They preferred a Writ Appeal. The said order was confirmed in Writ Appeal by a Division Bench of the High Court. ಡಿವಿಜನ್ ಬೆಂಚ್ ಕೂಡ ಸಿಂಗಲ್ ಜಡ್ಜ್ ತೀರ್ಪನ್ನು ಎತ್ತಿ ಹಿಡಿಯಿತು. ಇವರಿಗೆ ಹಕ್ಕಿಲ್ಲ, ಹಾಗೆ ಕಲೆಕ್ಟ್ ಮಾಡಬಾರದಾಗಿತ್ತು, ಕಲೆಕ್ಟ್ ಮಾಡಿದ ಹಣವನ್ನು ವಾಪಸ್ಸು ಕೊಡಬೇಕು ಎಂದು ಮಾಡಿದರು. ಅದಾದ ಮೇಲೆ ತಾವೇನು ಮಾಡಿದ್ದೀರಿ? In order to remedy the defect ಹೈಕೋರ್ಟ್ ಜಡ್ಜ್‌ಮೆಂಟ್ ಬಂದಮೇಲೆ "to validate the levy" an amendment Act was enacted in 1993 introducing new sections 28A, 28B and 28C along with a validating provision. ತಾವು ಮಾಡಿರುವುದೆಲ್ಲವೂ ಕರೆಕ್ಟ್ ಎಂದು ಮಾಡಲು ಹೋಗುತ್ತಾರೆ, ಅದಕ್ಕಾಗಿ ಇನ್ನೊಂದು ತಿದ್ದುಪಡಿ ತಂದಿದ್ದೀರಿ. ನೋಟೀಫಿಕೇಶನ್‌ನ ಬದಲು ತಿದ್ದುಪಡಿಯನ್ನು ತಂದಿರಿ. The said Amendment Act was challenged before the High Court in Writ Petition on the ground that it suffered from the vice of excessive delegation and is arbitrary and violative of Article 14 of the constitution. ಹೈಕೋರ್ಟ್‌ನಲ್ಲಿ ಏನಾಯಿತು? The high Court negatived all those contentions. ನೀವು ಹೈಕೋರ್ಟಿನಲ್ಲಿ ಗೆದ್ದು ಬಿಟ್ಟಿರಿ. ಆಗ ಯಾರೋ ಒಬ್ಬರು ಪುಣ್ಯಾತ್ಮರು ಸುಪ್ರೀಮ್ ಕೋರ್ಟಿಗೆ ಹೋದರು. ಸ್ಪೆಶಲ್ Leave ಪಿಟಿಶನ್ ಹಾಕಿದರು. Against that order a Special Leave Petition was filed before the Supreme Court in Civil Appeal No..... by Shri B. Krishna Bhat. The supreme Court has upheld the validity of

Section 28A to 28C of the BDA Act 1976 which were incorporated in 1993 Amendment Act. But, ಇದು ಬಹಳ ಮುಖ್ಯ it has set-aside Section 7 of the Amendment Act which provided for validation of collection of property tax made by the BDA prior to the date of amendment. ಏನು ಅಮೆಂಡ್‌ಮೆಂಟ್ ಮಾಡಿದ್ದೀರಿ ಅದಕ್ಕೆ ಕಾರಣ ಮುಂಚೆ ಕಲೆಕ್ಟ್ ಮಾಡಿದ್ದೀರಿ. ನಿಮಗೆ ಹಕ್ಕು ಇಲ್ಲದಿದ್ದರೂ ಕೂಡ ಹಾಗೆ ಮಾಡಿದ್ದೀರಿ. ಅದನ್ನು ವಾಲಿಡೇಟ್ ಮಾಡುವುದಕ್ಕೆ ತಪ್ಪು ಎಂದು ಸುಪ್ರೀಂಕೋರ್ಟ್ ಸ್ಪೆಶಲ್ ರಿಟ್ ಪಿಟಿಶನ್‌ನಲ್ಲಿ ಹೇಳಿತು. validation of such collection is impermissible. Further it has also held that tax already collected is liable to be refunded. ಇದನ್ನು ಸುಪ್ರೀಂಕೋರ್ಟ್ ಹೇಳಿತು ಸ್ವಾಮಿ. ಹಕ್ಕಿಲ್ಲದೇನೇ ನೀವೇನು ದುಡ್ಡು ಕಲೆಕ್ಟ್ ಮಾಡಿದ್ದೀರಿ, ಅಧಿಕಾರ ಇಲ್ಲದೆ ಕಲೆಕ್ಟ್ ಮಾಡಿದ್ದೀರಿ ಅದನ್ನೆಲ್ಲಾ ವಾಪಸ್ಸು ಕೊಡಿ ಎಂದು ಬಿಡಿಎಗೆ ಹೇಳಿದರು. ಸರ್ಪೋಚ್ಚ ನ್ಯಾಯಾಲಯದ ತೀರ್ಪು ಸರ್ಪೋಚ್ಚವಾಗಿರಬೇಕು ತಾನೇ? ಅದಕ್ಕಾದರೂ ಸರ್ಕಾರ ತಲೆ ಬಾಗಬೇಕು. ಸಾಮಾನ್ಯ ಜನರು ತೀರ್ಪುಗಳಿಗೆ ತಲೆಬಾಗಬೇಕೆಂದು ನಾವು ಬಯಸುತ್ತೇವೆ, ಹಾಗೆಯೇ ಸರಕಾರ ಕೂಡ ತಲೆಬಾಗಬೇಕು: ಆದರೆ ತಾವುಗಳು ಹಾಗೆ ಮಾಡಲಿಲ್ಲ. ಇವೊತ್ತು ಈ ಅಮೆಂಡ್‌ಮೆಂಟ್‌ನ್ನು ತಂದಿದ್ದೀರಿ. ಈ ಅಮೆಂಡ್‌ಮೆಂಟ್‌ನ್ನು ತಂದು ಬಿಟ್ಟು ನೀವು ವಾಲಿಡೇಟ್ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದೀರಿ. ತಾವು ಹೇಳುವುದು "It is impossible"- ನಾವು ದುಡ್ಡು ಕೊಡುವುದಕ್ಕೆ ಆಗುವುದಿಲ್ಲ. ಒಂದು ಸಾರಿ ನಾವು ಹೀಗೆ ದುಡ್ಡು ಕೊಡುವುದಕ್ಕೆ ಶುರು ಮಾಡಿದರೆ ಬೇರೆಯವರೆಲ್ಲಾ ಬಂದು ಕೇಳಲು ಶುರು ಮಾಡುತ್ತಾರೆ. ಈ ಒಂದು ವಾದವು ಯಾವುದೇ ತರ್ಕ ಇಲ್ಲದಿರುವ ವಾದ. ನೀವು ಮಾಡಿರುವುದೇ ತಪ್ಪು. ನಿಮಗೆ ಅಂಥ ಹಕ್ಕೇ ಇರಲಿಲ್ಲ. ಹಣವನ್ನು ಕಲೆಕ್ಟ್ ಮಾಡಿದ್ದೀರಿ. ಆಗಲೇ ಒಂದು ಎಚ್ಚರಿಕೆಯನ್ನು ಹೈಕೋರ್ಟ್ ಕೊಟ್ಟಿತ್ತು. ಆದರೂ ಕೂಡ ನೀವು ಮಾಡಿದ್ದೀರಿ. ಜಡ್ಜ್‌ಮೆಂಟ್‌ನ ನಂತರವು ಕಂಟಿನ್ಯೂ ಮಾಡಿದ್ದೀರಿ. ಈಗ ವ್ಯಾಲಿಡೇಟ್ ಮಾಡಬೇಕೆಂದು ಹೊರಟಿದ್ದೀರಿ. ನನ್ನ ಪ್ರಶ್ನೆ ಇರುವುದು, ಇವರ ಕನ್‌ವಿನಿಯನ್ಸ್‌ಗೋಸ್ಕರ ಬಿಡಿಎ ಕನ್‌ವೀನಿಯನ್ಸ್‌ಗೋಸ್ಕರ ಸರಕಾರದ ಒಂದು ಅನುಕೂಲಕ್ಕೋಸ್ಕರ ಈ ತಿದ್ದುಪಡಿ ತರುವುದು ಯಾವ ರೀತಿಯಿಂದ ಜನಪರವಾದ ತಿದ್ದುಪಡಿಯಾಗುತ್ತದೆ? ಯಾವ ರೀತಿಯಿಂದ ಜನಕ್ಕೆ ಬಿಡಿಎ ಸೈಟ್ ತಗೆದುಕೊಂಡು 10-15-20 ವರ್ಷ ಸ್ಯಾನಿಟರಿ ಕನೆಕ್ಷನ್ ಇಲ್ಲ., ಲೈಟ್ ಇಲ್ಲ, ರಸ್ತೆ ಇಲ್ಲ, ನೀರು ಇಲ್ಲ, ಮುಂತಾಗಿ ಎಲ್ಲಾ ಕಷ್ಟ ಅನುಭವಿಸಿಕೊಂಡು ಅವರ ಹತ್ತಿರ ನೀವು ಟ್ಯಾಕ್ಸ್ ಕಟ್ಟಿಸಿಕೊಂಡಿದ್ದೀರಲ್ಲಾ, ಅವರಿಗೆ ವಾಪಸ್ಸು ಕೊಡದೇ ಹೋದರೆ, ನೀವೇ ಅನುಭವಿಸುವುದಕ್ಕೆ ನೀವು ಹಕ್ಕು ತೆಗೆದುಕೊಳ್ಳುವುದಕ್ಕೆ ಈ ತಿದ್ದುಪಡಿ ಕೊಡುವುದಕ್ಕೆ ಹಕ್ಕು ಕೊಟ್ಟವರು ಯಾರು? ಯಾವ ರೀತಿಯಿಂದ ತಿದ್ದುಪಡಿಯನ್ನು ತರುತ್ತೀರಿ? ತಾವು ಹೇಳುತ್ತೀರಿ. It is inconvenient to the BDA and impossible for BDA to repay the tax. ಈಗ ಯಾರಾದರೂ ಒಬ್ಬ ವ್ಯಕ್ತಿ ಅಥವಾ ನಾನು ಮನೆ ಕಟ್ಟಿದ್ದೇನೆ. ಇದನ್ನು ಒಡೆಯ ಬಾರದು ಎಂದು ಹೇಳಿದರೆ ಇವರು ಬಂದು ಇಲ್ಲೀಗಲ್ ಎಂದು ಒಡೆಯುವುದಿಲ್ಲವೇ? ಆ ವ್ಯಕ್ತಿಗೆ ಇದು ಇನ್‌ಕನ್‌ವೀನಿಯಂಟ್ ಆಗುವುದಿಲ್ಲವೆ? ಹಾಗೆಯೇ ಅವರ ಹಣವನ್ನು ಕೂಡ ವಾಪಸ್ಸು ಕೊಡಬೇಕು. You are duty-bound to rapay the money collected. ನಿಮಗೆ ಅಮೆಂಡ್‌ಮೆಂಟ್ ಮಾಡುವುದಕ್ಕೆ

ಪವರ್ಸ್ ಇದೆಯೆಂದು ಮಾಡುವುದು, ಒಬ್ಬ ನಾಗರೀಕನಿಗೆ ಅಮೆಂಡ್ ಮಾಡುವ ಅಧಿಕಾರವೇ ಇಲ್ಲ. ನೀವು ಬಂದಾಗ ಮನೆ ಒಡೆಸಿಕೊಂಡು ಕುಳಿತುಕೊಳ್ಳಬೇಕು. ಇವೊತ್ತು ಬಿಡಿಎ ನವರು ಜನಸಾಮಾನ್ಯರು ಬೆಂಗಳೂರು ಡೆಮಾಲಿಶನ್ ಅಥಾರಿಟಿ ಎಂದು ಹೇಳುತ್ತಾರೆ. ಅವರು ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಯಾರ್ಯಾರು ಕಾನೂನು ವಿರೋಧವಾಗಿ ಮನೆ ಕಟ್ಟಿದ್ದಾರೆ, ಆ ಮನೆಯನ್ನು ಒಡೆದು ಹಾಕುವುದು ಬಹಳ ದೊಡ್ಡ ಕೆಲಸವೆಂದು ಮಾಡುತ್ತಾ ಇದ್ದಾರೆ. ಡೆಲ್ಲಿಯಲ್ಲಿಯೂ ಕೂಡ ಮೆಚ್ಚುಗೆಯಾಗುವಂಥ ಕೆಲಸವಾಗುತ್ತಾ ಇದೆ. ಮನೆಯನ್ನು ಏಕೆ ಒಡೆಯುತ್ತೀರಿ? ಆ ಮನೆಯು ಇಲ್ಲೀಗಲ್ ಕನ್‌ಸ್ಟ್ರಕ್ಷನ್ ಎಂದು ಒಡೆಯುತ್ತೀರಾ? ಅನಧಿಕೃತವಾಗಿ, ಕಾನೂನು ಬಾಹಿರವಾಗಿ, ಆ ಮನೆಯನ್ನು ಕಟ್ಟಿದ್ದಾರೆ ಅದಕ್ಕೋಸ್ಕರ ಒಡೆಯುತ್ತಿದ್ದೇವೆಂದು ಹೇಳುತ್ತಾರೆ. ಹಾಗಾದರೆ ಕಾನೂನು ಬಾಹಿರವಾದ ಒಂದು ಕಟ್ಟಡವನ್ನು ನೀವು ಒಡೆಯ ಬಹುದಾದರೆ, ಕಾನೂನು ಬಾಹಿರವಾಗಿ ದುಡ್ಡು ಕಲೆಕ್ಟ್ ಮಾಡಿದ್ದೀರಲ್ಲಾ, ಅದನ್ನು ಏಕೆ ವಾಪಸ್ಸು ಕೊಡಬಾರದು? ಅದರೆ ಈ ಹಣವನ್ನು ಕಲೆಕ್ಟ್ ಮಾಡಿಕೊಂಡು ಫ್ಯಾಲಿಡೇಟ್ ಮಾಡುವ ಬದಲು, ವಾಪಸ್ಸು ಏಕೆ ಕೊಡುತ್ತಿಲ್ಲ? ಅದು ಒಂದು ಪ್ರಶ್ನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ವಾಪಸ್ ಕೊಡುವುದು ಇಂಪಾಸಿಬಲ್ ಎಂದು ಹೇಳಿದ್ದಾರೆ. ಹಣವನ್ನು ಕೊಡುವುದು ಕಷ್ಟ ಎಂದು ಹೇಳಿದ್ದಾರೆ. ನಾವು ಪ್ರತೀ ವಾದವೂ ಪತ್ರಿಕೆಗಳಲ್ಲಿ ಓದುತ್ತೇವೆ. "ಬಿಡಿಎ ತನ್ನ ಆಸ್ತಿಯನ್ನು ವಾಪಸ್ಸು ಪಡೆದಿದೆ" - ಅದರ ಬೆಲೆಯು ಸುಮಾರು 5 ಕೋಟಿ, 6 ಕೋಟಿ, 8 ಕೋಟಿ, 9 ಕೋಟಿ, 10 ಕೋಟಿಗಳಷ್ಟು ಎಂದು ಖರದಿಯು ಬರುತ್ತಿರುತ್ತದೆ. ನಾಲ್ಕು ಸೈಟು ಮಾರಿ. ಆ ದುಡ್ಡನ್ನು ಜನರಿಗೆ ವಾಪಸ್ಸು ಕೊಡಿ. ಆ ಜನಕ್ಕೆ ನ್ಯಾಯುತವಾಗಿ ಬರುವ ಹಣವನ್ನು ಕೊಡುವುದನ್ನು ಬಿಟ್ಟು ಹೀಗೆ ಏಕೆ ಮಾಡುತ್ತಿದ್ದೀರಿ? It is right on the part of the Government? ಇದರಿಂದ ನೀವೇನು ಗುರಿ ಸಾಧಿಸುತ್ತೀರಿ? ಇದೊಂದು ಮುಖ್ಯವಾದ ಪ್ರಶ್ನೆ. ಮಾನ್ಯ ಅಧ್ಯಕ್ಷರೇ, ಬಿಡಿಎ ದವರ ಡ್ಯೂಟಿ ಏನು ಎಂದು 1998ರ ಜಡ್ಜ್‌ಮೆಂಟ್‌ನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಬಿಡಿಎದು ಎರಡು ಕೆಲಸ. ಒಂದು ಪ್ಲಾನಿಂಗ್, ಇನ್ನೊಂದು ಡೆವಲಪ್‌ಮೆಂಟ್. ಇವೆರಡರ ವಿಜೆನ್ಸಿ ಬಿಡಿ ಎಲ್ಲಿ ಡೆವಲಪ್ ಮಾಡಬಾರದೋ ಪ್ಲಾನಿಂಗ್ ಏರಿಯಾದಲ್ಲೆಲ್ಲಾ ಹೋಗಿ ಡೆವಲಪ್ ಮಾಡುವುದಕ್ಕೆ ಯಾರು ಇವರಿಗೆ ಹಕ್ಕು ಕೊಟ್ಟರು? There is a power for BDA to develop in those areas where it has no power ಅದರ ವ್ಯಾಪ್ತಿ ಇಲ್ಲದ ಜಾಗದಲ್ಲಿ ಡೆವಲಪ್ ಮಾಡಲು ಬಿಡಿಎಗೆ ಹಕ್ಕು ಕೊಟ್ಟವರು ಯಾರು? ಹಿಂದೆ ಬಿಡಿಎ ಆಕ್ಟ್ 2ಸಿನಲ್ಲಿ ಬಿಡಿಎ ಅಂದರೇನೆಂದು ಹೇಳಲಾಗಿದೆ. ಬೆಂಗಳೂರು ಮೆಟ್ರೊಪಾಲಿಟನ್ ಏರಿಯಾದಲ್ಲಿ ನೀವು ಮಾಡಬೇಕು. Bangalore Metropolitan area means the area comprising city of Bangalore as it is defined in City of Bangalore Corporation Act -1979 ಈ ಚೌಕಟ್ಟಿನಲ್ಲಿ ಇವರು ಕೆಲಸ ಮಾಡಬೇಕು. areas where the city of Bangalore implemented 1945 as immediately before the commencement of this act in force and such other areas adjacent to the aforesaid as the Govt. may from time to time by notification. ಅಂದರೆ ಅದರ ಅಕ್ಕಪಕ್ಕ ಮಾಡಬೇಕು. ನೋಟಿಫೈ ಮಾಡಿರಬೇಕು. ಅಲ್ಲಾಂದ್ರೆ ಅಕ್ಕಪಕ್ಕದಲ್ಲಿರಬೇಕು. ಎರಡಲ್ಲೊಂದಾದರೂ ಇರಬೇಕು ತಾನೇ? ಹೀಗಿರುವಾಗ ಪ್ಲಾನಿಂಗ್ ಏರಿಯಾದಲ್ಲಿ ಇವರು ಪ್ಲಾನ್ ಮಾಡುವ ಡ್ಯೂಟಿ ಇದೆ,

ಡೆವಲಪ್ ಮಾಡಬೇಕಾದಾಗ ಮೆಟ್ರೊಪಾಲಿಟನ್ ಏರಿಯಾದಲ್ಲಿ ಮಾತ್ರ ಮಾಡಬೇಕು. How that they can develop areas in planning area? ಉದಾಹರಣೆಗೆ ಅಂಜನಾಪುರ. ಅಂಜಾನಪುರದಲ್ಲಿ ಇವರು ನಿವೇಶನ ಮಾಡುತ್ತಿದ್ದಾರೆ. ಅಂಜನಾಪುರವೇನು ಬೆಂಗಳೂರು ಮೆಟ್ರೊಪಾಲಿಟನ್ ಏರಿಯಾನ ಸ್ವಾಮಿ? ಅಥವಾ ಬೆಂಗಳೂರು ಸಿಟಿ ಕಾರ್ಪೊರೇಷನ್‌ಗೆ ಅಕ್ಕಪಕ್ಕ ಇದೆಯಾ? ಎರಡೂ ಅಲ್ಲ. who gave powers to develop that locality layout or in Anjanapura. ನಿಮ್ಮ 2ಸಿ ಕೊಡುವುದಿಲ್ಲ, ಸೆಕ್ಷನ್ 17, 18 ಕೊಡುವುದು. ಯಾವ ಶಕ್ತಿಯಿಂದ ಆ ಕೆಲಸಮಾಡುತ್ತೀರಿ? ನೀವು ತಿದ್ದುಪಡಿಯಲ್ಲಿ ಇವೆಲ್ಲಾ ಸೇರಿಸಿದ್ದೀರಾ? ಅದಕ್ಕಾಗಿ ಬಿಡಿಎ ತನ್ನ ವ್ಯಾಪ್ತಿಗಿಂತ ಜಾಸ್ತಿ ಕೆಲಸಗಳನ್ನು ಮಾಡುತ್ತದೆ. ತಾನು ಮಾಡಬೇಕಾದ ಕೆಲಸವನ್ನು ಮಾಡುವುದಿಲ್ಲ. ಆ ಹಿನ್ನೆಲೆಯಲ್ಲಿ ಬಿಡಿಎ ನಾಗರೀಕರಿಗೆ ಅನ್ಯಾಯ ಮಾಡಿದೆ ಎಂದರೆ ತಪ್ಪಾಗದು. ಇವತ್ತು ಇಲ್ಲಿ ಹೇಳುತ್ತೀರಿ. in practice BDA was discharging municipal functions in respect of this layouts till they were handed over to either Mahanagarapalike or the concerned City Municipal Councils ಅಂತ ನಿಮ್ಮ ಉದ್ದೇಶದಲ್ಲಿದೆ. ಈ ಬಿಡಿಎ ಆಕ್ಟಿನಲ್ಲಿ ಎಲ್ಲಾದರೂ ಒಂದು ಕಡೆ ಸಿಎಂಸೀಸ್‌ಗೆ ಬಿಡಎ ತನ್ನ ಬಡಾವಣೆಯನ್ನು ವಹಿಸಿಕೊಡಬಹುದು ಎಂಬುದಕ್ಕೆ ಎಲ್ಲಿಯಾದರೂ ಅವಕಾಶ ಇದೆಯಾ? ಸಿಎಂಸಿಗೆ ಇವರು ಡೆವಲಪ್ ಮಾಡಿರುವ ಏರಿಯಾವನ್ನು ಹ್ಯಾಂಡ್ ಒವರ್ ಮಾಡಬಹುದೆಂದು ಇದ್ದರೆ ಹಾಗಂತ ನೀವು ತೋರಿಸಿದರೆ ನಾನು ಸುಮ್ಮನೆ ಕೂತುಬಿಡುತ್ತೇನೆ. ನಿಮಗೆ ಪವರ್ಸ್ ಇರುವುದೇ ಸಿಟಿ ಕಾರ್ಪೊರೇಷನ್ ಲಿಮಿಟ್‌ನಲ್ಲಿ ಡೆವಲಪ್ ಮಾಡಬೇಕಾಗಿತ್ತು. ಸಿಟಿ ಕಾರ್ಪೊರೇಷನ್‌ಗೆ ವಹಿಸಿಕೊಡಬೇಕಾಗಿತ್ತು. ಅದನ್ನು ನೀವು ಮಾಡಲಿಲ್ಲ. ಹೀಗೆ ಬಿಡಿಎ ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗವಹಿಸಿರುವುದಕ್ಕೆ ಬಹಳ ಸ್ಪಷ್ಟ ಉದಾಹರಣೆ ಈ ಪ್ರಕರಣದಲ್ಲಿ ನಮಗೆ ಗೊತ್ತಾಗುತ್ತದೆ. ಸಿಎಂಸೀಸ್‌ಗೆ ನೀವು ಕೊಡುವಂತಿಲ್ಲ. ಅಂಜನಾಪುರ ಬೆಂಗಳೂರು ಕಾರ್ಪೊರೇಷನಿಂದ ಎಷ್ಟು ದೂರವಿದೆ ಗೊತ್ತಾ ಸ್ವಾಮಿ? ಬಹಳ ದೂರವಿದೆ. ಬಿಸಿಸಿಗೆ ಅದು ಅಕ್ಕಪಕ್ಕವಿಲ್ಲ. ಆದುದರಿಂದ ನಿಮಗಿರುವ ಸೆಕ್ಷನ್‌ಗಳ ಸ್ಪಷ್ಟ ಉಲ್ಲಂಘನೆ ಇವತ್ತು ಬಿಡಿಎ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ನಾನು ಸರ್ಕಾರವನ್ನು ಕೇಳುವುದು ತಾವು ಮಾಡಿರುವ ಒಂದು ಅಪರಾದಕ್ಕೆ ಪ್ರಮಾದಕ್ಕೆ ಈ ತಿದ್ದುಪಡಿಯ ರಕ್ಷಣೆ ಯಾಕೆ ತೆಗೆದುಕೊಳ್ಳಬೇಕು? ಈ ತಿದ್ದುಪಡಿ ಮೂಲಕ ಯಾವ ಸಾರ್ವಜನಿಕ ವ್ಯಕ್ತಿಗೆ ಲಾಭವಾಗುವುದು? ಯಾವನೋ ಬಿಡಿಎ ಸೈಟ್ ಕೊಂಡಿದ್ದಾರೆ ಅವನಿಗೇನು ಲಾಭ? ತಿದ್ದುಪಡಿಗೆ ಕಾರಣವನ್ನು ತಾವು ಹೇಳುತ್ತೀರಿ. in the circumstances, apprehensions are that there will eb innumerable requests for refund of tax in accordance with the supreme court judgement which would be impossible for the BDA to concede to such requests. ಏನು ಸ್ವಾಮಿ, ನಿಮ್ಮದುಡ್ಡು ಕೊಡುತ್ತೀರಾ? ಅವರ ದುಡ್ಡು ಅದು. ತಗೋಬಾರದ ಅವವ ದುಡ್ಡನ್ನು ತೆಗೆದುಕೊಂಡಿದ್ದೀರಿ it is your duty to refund. ಅದಕ್ಕೋಸ್ಕರ ಈ ತಿದ್ದುಪಡಿ ಯಾಕೆ ತರುತ್ತೀರಾ? how can you said it is impossible? ಹಾಗಾದರೆ ಇಂಪಾಸಿಬಲ್ ಆಗುವ ಕೆಲಸವನ್ನು ನೀವು ಮಾಡುವುದಕ್ಕೆ ಹೋಗಬಾರದಿತ್ತು. ಇಂಪಾಸಿಬಲ್ ಆದ ಕೆಲಸಗಳನ್ನೆಲ್ಲಾ ಇನ್ನು ಮುಂದೆ ತಿದ್ದುಪಡಿ ಮೂಲಕವೇ ತಂದುಬಿಡಬಹುದಲ್ಲಾ.

who will give you authority for doing such things? ಜನಸಾಮಾನ್ಯರು ಮಾಡಬಾರದ ತಪ್ಪನ್ನು ಸರ್ಕಾರ ಕೂಡ ಮಾಡಬಾರದು. ನನಗೇನೋ ಅಮೆಂಡ್‌ಮೆಂಟ್ ಪವರ್ಸ್ ಇದೆಯೆಂದು ನಾನು ಮಾಡಿರುವ ತಪ್ಪನ್ನು ಮುಚ್ಚಿಕೊಳ್ಳವುದಕ್ಕೋಸ್ಕರ ಈ ತಿದ್ದುಪಡಿ ತರುವುದು ಯಾವುದೇ ರೀತಿಯಲ್ಲಿ ಕೂಡ ಯೋಗ್ಯವಲ್ಲ, ಈ ಹಿನ್ನೆಲೆಯಲ್ಲಿ ಈ ತಿದ್ದುಪಡಿಯನ್ನು ವಿರೋಧಿಸಿ, ಬಿಡಿಣ ಹೈಕೋರ್ಟ್‌ನಲ್ಲಿ ಹೇಳಿದರೂ ಬುದ್ದಿ ಕಲಿಯದೆ ವಸೂಲು ಮಾಡಬಾರದ್ದನ್ನು ವಸೂಲು ಮಾಡಿ ತನ್ನ ಕರ್ತವ್ಯದ ಸ್ಪಷ್ಟ ಉಲ್ಲಂಘನೆ ಮಾಡಿ ಇವತ್ತೇನು ದುಡ್ಡು ವಾಪಸ್ ಕೊಡಬೇಕು ಹಾಗೆ ವಾಪಸ್ ಕೊಡುವುದನ್ನು ನುಣುಚಿಕೊಳ್ಳುವುದಕ್ಕೋಸ್ಕರ infact if I can use a stronger word you want to cheat the ordinary public ಯಾರಿಗೆ ನೀವು ಸೈಟ್ ಹಂಚಿದ್ದೀರಿ ಅವರ ಹತ್ತಿರ ದುಡ್ಡು ತೆಗೆದುಕೊಂಡಿದ್ದೀರಿ. ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್‌ನಲ್ಲಿ ಇವತ್ತು 370 ಜನ ಸುಮಾರು 370 ಕೋಟಿ ರೂ. ದುಡ್ಡಿಟ್ಟಿದ್ದಾರೆ. ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್‌ನವರು ಹೇಳುತ್ತಾರೆ. it is impossible for me to give back money ಅಂತ. ಅವನಿಗೆ ಯಾವ ಅಮೆಂಡ್ ಮೆಂಟ್ ನಿಂದ ಸಹಾಯ ಮಾಡತ್ತೀರಿ? ಸರ್ಕಾರ ಒಂದು ಮೇಸ್ಟ್ರು, ಮೇಸ್ಟ್ರೇ ಸರಿಯಾಗಿ ವರ್ತಿಸದೇ ಇದ್ದರೆ ವಿದ್ಯಾರ್ಥಿಗಳೆಲ್ಲಾ ಇನ್ನು ಹೇಗೆ ವರ್ತಿಸಬಹುದು. ಆದುದರಿಂದ ನೀವು ನಿಮ್ಮ ಕರ್ತವ್ಯದಲ್ಲೂ ಕೂಡ ಲೋಪ ಮಾಡಿದ್ದೀರಿ, ಬಡಾವಣೆ ಮಾಡುವಾಗಲೂ ನಿಮಗೆ ಅಧಿಕಾರ ಇಲ್ಲದೇ ಇರುವ ಸ್ಥಳಕ್ಕೆ ಹೋಗಿ ಬಡಾವಣೆಗಳನ್ನು ಮಾಡುತ್ತಿದ್ದೀರಿ. ಈ ಹಣವನ್ನು ವಾಪಸ್ ಕೊಡುವ ಬದಲು ಒಂದು ರೀತಿಯಿಂದ ಜನವಿರೋಧಿ ತಿದ್ದುಪಡಿ ತಂದು ಜನರಿಗೇನು ವಂಚನೆ ಮಾಡಲು ಹೊರಟಿದ್ದೀರಿ; ಈ ತಿದ್ದುಪಡಿಯನ್ನು ನಾನು ಸ್ಪಷ್ಟವಾಗಿ ವಿರೋಧಿಸುತ್ತೇನೆ. ದಯವಿಟ್ಟು ಬೆಂಗಳೂರು ಜನಕ್ಕೆ ನೀವು ಅನ್ಯಾಯ ಮಾಡುವುದಕ್ಕೆ ಹೋಗಬೇಡಿ. ನೀವು ಮಾಡಿದ ತಪ್ಪಿಗೆ ಬೆಂಗಳೂರು ನಗರ ನಾಗರೀಕ ಬಾಧ್ಯಸ್ತನಲ್ಲ. He is not a party to it. ಪಾಪ ಅವನು ಕೊಡುತ್ತಲೇ ಬಂದ. ಈ ಹಿನ್ನೆಲೆಯಲ್ಲಿ ಈ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಿ ಇಲ್ಲದೇ ಇದ್ದರೆ ಮತ್ತೊಂದು ಸಲ ಸಿಂಗಲ್ ಜಡ್ಜ್, ಡಿವಿಜನ್, ಸೆಕೆಂಡ್ ಲೀವ್ ಪಿಟಿಶನ್, ಮತ್ತೊಂದು ತಪರಾಕಿ, ಬಿಡಿಎಗೆ ಮತ್ತೊಂದು ತಿದ್ದುಪಡಿ ಆಗುವುದು ಬೇಡ? ಕೊಟ್ಟಬಿಡಿ ದುಡ್ಡು ವಾರಸ್ ಈ ತಿದ್ದುಪಡಿ, ಸದನದ ಸಮಯ ಅದಕ್ಕೆಲ್ಲಾ ಅವಕಾಶ ಬೇಡ. ಈ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳುವುದು ಸರ್ಕಾರಕ್ಕೆ ಮರ್ಯಾದೆ ತರುತ್ತದೆ. ಭೂಷಣಾನೂ ತರುತ್ತದೆ ಎಂದು ಹೇಳಲು ಇಷ್ಟಪಡುತ್ತೇನೆ.

+ ಶ್ರೀ ಕೆ. ಎನ್. ಸುಬ್ಬಾರೆಡ್ಡಿ (ಬಸವನಗೌಡ) : ಮಾನ್ಯ ಅಧ್ಯಕ್ಷರೆ, ಹೈಕೋರ್ಟ್ ತೀರ್ಪಾಯಿತು. ಅದರ ಮೇಲೆ ಸುಪ್ರೀಂ ಕೋರ್ಟ್‌ದೂ ತೀರ್ಪಾಯಿತು. ಫೈನಲ್ ಆಗಿ ಡಿಸ್ ಪೋಸಲ್ ಮಾಡಿದರು. ಇದರಿಂದ ಎಷ್ಟು ಜನಕ್ಕೆ ನಾವು ಎಷ್ಟು ಪೇಮೆಂಟ್ ಕೊಡಬೇಕಾಗಿ ಬರುತ್ತದೆ. ಈ ಮಾಹಿತಿಯನ್ನು ನೀವು ಒದಗಿಸಿಲ್ಲ. this amendment is to overcome supreme court decision ಆದರೆ ಇಷ್ಟೊಂದು ಅಮೌಂಟಾಗುವುದು ಇದನ್ನು ಕೊಡುವುದಕ್ಕಾಗುವುದಿಲ್ಲ ಎಂಬುದು ಶಾಸಕರಿಗಾದರೂ ತಿಳಿಸಬೇಕಲ್ಲಾ. ಎಷ್ಟು ಜನ ನಾಗರಿಕರಿಗೆ ಇದರಿಂದ ತೊಂದರೆಯಾಯಿತು. ನಾಗರೀಕರು ಸುಪ್ರೀಂ ಕೋರ್ಟ್‌ನವರೆಗೂ ಹೋಗಿ ಫೈಲ್ ಮಾಡಿ ಗೆದ್ದಿದ್ದಾರಲ್ಲಾ. ಆ ರೀತಿ ಗೆದ್ದಿರುವಾಗ ಎಷ್ಟು ಅಮೌಂಟನ್ನು ಬಿಡಿಎ ನವರು ಇವತ್ತು ಕೊಡಬೇಕಾಗುತ್ತದೆ.

ಅಧ್ಯಕ್ಷರು : ಉತ್ತರದಲ್ಲಿ ಹೇಳುತ್ತಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಅದೇ ಮುಖ್ಯವಾದುದು. ಎರಡನೆಯದು ಅನೇಕ ಕಟ್ಟಡಗಳನ್ನು ಬಿಡಿಎ ನವರು ಒಡೆಯುತ್ತಿದ್ದಾರೆ. ಈಗ 3 ಕೋಟಿ, 4 ಕೋಟಿ, 5 ಕೋಟಿ ರೂ. ಬೆಲೆ ಬಾಳುವ ಬಿಲ್ಡಿಂಗ್‌ಗಳನ್ನು ಒಡೆಯುವ ಬದಲು ವ್ಯಾಲ್ಯು ಮಾಡಿಬಿಟ್ಟು ಇಷ್ಟು ಅಮೌಂಟ್ it is worth about Rs. 4 crores or five crores you are liable to pay, otherwise we are going to demolish, ಎಂದು ಹೇಳಿ ಹೇಳಬಹುದಿತ್ತು. ಅದನ್ನೂ ಮಾಡಬಹುದಿತ್ತು. ನೋಟೀಸ್ ಕೊಟ್ಟು, ನಾವು ಎಂಥ ಎಂಥ ಬಿಲ್ಡಿಂಗ್‌ಗಳನ್ನು ನೋಡುತ್ತಿದ್ದೇವೆ. ಅನ್‌ಆಥರೈಸ್ಡ್ ಕನ್ಸ್‌ಟ್ರಕ್ಷನ್ ಆಗಿದೆ ಎನ್ನುವುದನ್ನು ಆಫ್ಟರ್ 10 ವರ್ಷ, 15 ವರ್ಷದಿಂದಲೂ ಆಗ ಬಿಡಿಎ ನವರು ಏನೂ ಮಾಡಿಲಿಲ್ಲ. ಇವತ್ತಿನ ದಿವಸ ನೀವೇನು ಮಾಡುತ್ತಿದ್ದೀರಿ, you are distroying the building. Why you should demolish. Instead of that. why not you give a notice to him, within one week or one month if you pay this amount we are not going to demolish. ಅದಾದರೂ ಒಂದನ್ನು ಮಾಡಬಹುದಿತ್ತು. ಆಮೇಲೆ ಸಿವಿಕ್ ಅಮೆನಿಟೀಸ್ ಏನು ಇದೆ, supposing you want to overcome the decision of the supreme court, only one way for them is, we are going to have civic amenity facilities to the extension ಏನಾದರೂ ನಿಮಗೆ ಪ್ಲಾನ್ಸ್ ಇದೆಯೇ? If you want not to pay back and in order to overcome this. you have brought this amendment. ಸಿವಿಕ್ ಅಮೆನಿಟೀಸ್ ಇವತ್ತಿನ ದಿವಸ ಪಲ್ಯೂಷನ್, ನಾಯ್ಸ್ ಪಲ್ಯೂಷನ್ ಇದೆ, ನೀರಿನದು ಇದೆ, ಆಮೇಲೆ ರಸ್ತೆ ಇಲ್ಲ, ಲೈಟ್ಸ್ ಇಲ್ಲ. What you are going to do to improve the area.

ಅಧ್ಯಕ್ಷರು : ಟ್ಯಾಕ್ಸ್ ದುಡ್ಡನ್ನು ವಾಪಸ್ ಕೊಡಬೇಕಲ್ಲಾ, ಅದರ ಬಗ್ಗೆ ಒಂದರ ಬಗ್ಗೆ ಮಾತ್ರ ಮಾತನಾಡಿ. ಮಿಕ್ಕಿದ್ದು ಇನ್ನೊಂದು ಸಲ ಮಾತನಾಡಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಸಭಾಧ್ಯಕ್ಷರೇ, Now they have to pay. ಅದರಿಂದಾಗಿಯೇ ಅದಕ್ಕೆ ನಾನು ಹೇಳುತ್ತಿರುವುದು.

In order to overcome the judgement, this amendment has been placed before us. What Mr. Suresh Kumar has said is correct. ಅವರೇನು ಹೇಳಿದ್ದಾರೆ, ನೀವು ಹೇಗೆ ಇಲ್ಲೀಗಲ್ ಆಗಿ ಕನ್ಸ್‌ಟ್ರಕ್ಷನ್ ಆಗಿರುವುದನ್ನು ಡೆಮಾಲಿಷ್ ಮಾಡಬೇಕೆಂದು ಹೇಳಿ ಬಿಡಿಎ ನವರು ಹೇಗೆ ಮಾಡುತ್ತಿದ್ದಾರೋ, ಅದೇ ರೀತಿ ಇಲ್ಲೀಗಲ್ ಆಗಿ by Notification you have collected the amount. Then, why you should bring this amendment. Why you have allowed. Without any provision, you have done. That has been noticed by the High Court and the Supreme Court. In order to over come this judgement, this amendment is placed before us. The Commissioner is doing good service, I have not great regard for him. Why he must demolish.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಅದನ್ನು ಹೇಳುತ್ತಾರೆ. That is your proposal. Let the Government think over your proposal.

SRI K.N. SUBBAREDDY: What I want to make very clear is the decision of the supreme Court is based on the finding of the High Court. ನಾಗರೀಕರು ಮತ್ತೆ ಕೋರ್ಟಿಗೆ ಹೋಗುವಂತೆ ಮಾಡುತ್ತಿದ್ದೀರಿ. ಸಿ.ಎಂ. ಇಲ್ಲ. ಅದಕ್ಕೆ ಇದನ್ನು .....

ಅಧ್ಯಕ್ಷರು : ವೆರಿಗುಡ್. ನೀವು ಚೆನ್ನಾಗಿ ಮಾತನಾಡಿದಿರಿ. ಅವರು ಚೆನ್ನಾಗಿ ಮಾತನಾಡುತ್ತಿದ್ದಾರೆ.

ಶ್ರೀ ಕೆ. ಎನ್. ಸುಬ್ಬಾರೆಡ್ಡಿ : ಅದಕ್ಕೆ ಹೇಳುವುದಾದರೆ ಕಮೀಷನರ್ ಒಳ್ಳೆ ಕೆಲಸ ಮಾಡುತ್ತಿದ್ದಾರೆ. ಎಂಥೆಂಥ ಬಿಲ್ಡಿಂಗ್ಸ್‌ಗಳನ್ನು ಡೆಮಾಲಿಷ್ ಮಾಡುತ್ತಿದ್ದಾರೆ, ಅದರ ಬದಲು 3 ಕೋಟಿ, 4 ಕೋಟಿ, 5 ಕೋಟಿ ರೂ. ಎಂದು ಮಾಡಬಹುದಲ್ಲಾ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಆದ್ದರಿಂದ ಅಮೆಂಡ್‌ಮೆಂಟ್‌ನ್ನು ತಂದು ಮತ್ತೆ ನಾಗರೀಕರಿಗೆ ಕೋರ್ಟಿಗೆ ಹೋಗುವ ಹಾಗೆ ಮಾಡುತ್ತಿದ್ದೀರಿ.

ಅಧ್ಯಕ್ಷರು : ಉತ್ತರ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತೆ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಮಸೂದೆಗೆ ಸಂಬಂಧಪಡದಿದ್ದರೂ ಸಾಂದರ್ಭಿಕವಾಗಿ ನಮ್ಮ ವಿರೋಧ ಪಕ್ಷದ ನಾಯಕರು ನಮ್ಮ ಬಿಡಿಎ ಕೆಲಸದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಸರ್ಕಾರ ಬಿಡಿಎಗೆ ಸಂಬಂಧಪಟ್ಟ ಆಸ್ತಿಯನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಅವರು ಕೈಗೊಂಡಿರತಕ್ಕ ಕೆಲಸದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಿಜ. ನಾವು ಪ್ರಾರಂಭದಿಂದ ಎಚ್ಚರ ವಹಿಸಿದ್ದರೆ ಅನ್‌ಆಥರೈಸ್ಡ್ ಕನ್ಸ್‌ಟ್ರಕ್ಷನ್‌ಗಳು ಬರುವುದಕ್ಕೆ ಸಾಧ್ಯವಿಲ್ಲ. ಕಟ್ಟಿದ ಮೇಲೆ ಒಡೆದು ಹಾಕತಕ್ಕದ್ದು ಸರಿಯಲ್ಲ. ಈಗ ಅಡ್ಮಿನಿಸ್ಟ್ರೇಟಿವ್ ಫೈಲೂರ್ ಕಾರಣದಿಂದಾಗಿ ಅನ್‌ಆಥರೈಸ್ಡ್ ಕನ್ಸ್‌ಟ್ರಕ್ಷನ್ಸ್ ಬಂತು. ಆಮೇಲೆ ನಾವು ಒಡೆಯಬೇಕಾದಂಥ ಸನ್ನಿವೇಶ ಇದೆ. ಇದು ಒಂದು ಕಡೆಯಲ್ಲ, ಎಲ್ಲಾ ಕಡೆಯೂ ಇದೆ. ಆದರೂ ತಾವು ಹೇಳಿರುವ ಮಾತನ್ನು ಮೆಚ್ಚುತ್ತೇವೆ. ನಾವು ಅಡ್ಮಿನಿಸ್ಟ್ರೇಷನನ್ನು ನಡೆಸತಕ್ಕವರು ಬಹಳ ಜಾಗ್ರತೆಯಾಗಿದ್ದರೆ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ತಮ್ಮ ಮಾತನ್ನು ಗಂಭೀರವಾಗಿ ಪರಿಗಣಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ನಮ್ಮ ಸುರೇಶ್ ಕುಮಾರ್‌ರವರು ತುಂಬ ಚೆನ್ನಾಗಿ ವಿವರಣೆ ಮಾಡಿ ಹೇಳಿದ್ದಾರೆ. ಸರ್ಕಾರ ನಿಜವಾಗಿಯೂ ಸಂವೇದನಾಶೀಲವಾಗಿಯೇ ವರ್ತಿಸಬೇಕಾಗುತ್ತದೆ. ಜನರ ಪ್ರತಿನಿಧಿ ಎನ್ನುವ ಒಂದು ಸರ್ಕಾರ ಜನರಿಗೆ ಸ್ಪಂದಿಸದೇ ಹೋದರೆ ಅದು ಸಂವೇದನಾಶೀಲವಾದಂಥ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ ಇಲ್ಲಿ ಸರ್ಕಾರ ಸಂವೇದನೆಯನ್ನು ಕಳೆದುಕೊಂಡಿದೆ ಎನ್ನತಕ್ಕಂಥ ಅಭಿಪ್ರಾಯ ತಮಗೆ ಏಕೆ ಬಂದಿದೆಯೋ ನನಗೆ ಅರ್ಥವಾಗುತ್ತಿಲ್ಲ. ಕಾರಣವೇನೆಂದರೆ ನಾವೇನೂ ಕೆಲಸವನ್ನು ಮಾಡದೆ ನಾಗರೀಕ ಸೌಲಭ್ಯವನ್ನು ಕೊಡದೆ ತೆರಿಗೆಯನ್ನು ಹಾಕಿದ್ದರೆ ತಾವು ಹೇಳುವ ಮಾತನ್ನು ನಾನು ಒಪ್ಪುತ್ತಿದ್ದೆ. ಇಲ್ಲಿ ಆಗಿದ್ದು ಏನೆಂದರೆ ಒಂದು ನೋಟೀಫಿಕೇಷನ್ ಮುಖಾಂತರ ತೆರಿಗೆ ವಸೂಲು ಮಾಡತಕ್ಕ, ತೆರಿಗೆ ವಿಧಿಸತಕ್ಕ ಕೆಲಸವನ್ನು ಬಿಡಿಎ ಮಾಡಿಕೊಂಡು ಬಂದಿದೆ.

ಬಹುಶಃ ಆ ನೋಟೀಫಿಕೇಷನ್ ಬದಲಾಗಿ ಕಾನೂನಿಗೆ ತಿದ್ದುಪಡಿಯನ್ನು ತಂದುಕೊಂಡಿದ್ದರೆ ಆಗ ಯಾರೂ ಪ್ರಶ್ನೆ ಮಾಡುವುದಕ್ಕೆ ಬರುತ್ತಿರಲಿಲ್ಲ. ಏಕೆಂದರೆ ಈಗಲೂ ಕೂಡ ಸುಪ್ರೀಂ ಕೋರ್ಟು ಅಮೆಂಡ್‌ಮೆಂಟ್ ಆದ ತಾರೀಖಿನಿಂದ ತೆರಿಗೆಯನ್ನು ಹಾಕುವುದಕ್ಕೆ ಅಧಿಕಾರವನ್ನು ಕನ್‌ಫರ್ಮ್ ಮಾಡಿದೆ. That means the BDA has got power to levy tax, collect tax. ಅದನ್ನು ಡಿಸ್‌ಪ್ಯೂಟ್ ಮಾಡಿಲ್ಲ. ಸ್ಟಾಚುಟರಿ ಪವರ್ಸ್‌ನ್ನು ಕನ್‌ಫರ್ಮ್ ಮಾಡಿದೆ.ಪೈಯರ್ ಟು ದಟ್ ಈ ಅಮೆಂಡ್‌ಮೆಂಟ್ ಬರುವುದಕ್ಕೆ ಮುಂಚಿತವಾಗಿ ನೀವು ಮಾಡಿದ್ದನ್ನು ವಾಪಸ್ ಕೊಡಬೇಕೆಂದು ಅಷ್ಟೇ ಹೇಳಿದ್ದಾರೆ. ಈಗ ಅಮೆಂಡ್‌ಮೆಂಟ್ ತರದ ನಂತರ prospective ಆಗಿ ವಸೂಲು ಮಾಡತಕ್ಕ ಅಧಿಕಾರ ಬಿಡಿಎ ಗೆ ಇದ್ದರೆ ನಾವು ಅದರ ಹಿಂದೆ it is mere technical lapse. Otherwise, there is nothing ಅದಕ್ಕೋಸ್ಕರ ಆ ಸಣ್ಣ ಮಿಸ್ಟೇಕನ್ನು ರೆಕ್ಟಿಫೈ ಮಾಡಬೇಕಾದಂಥ ಅಗತ್ಯ ಇದೆ. ಕಾರಣ ಏನೆಂದರೆ.....

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ವಾರ್ತಾ ಸಚಿವರು) : ಮಾನ್ಯ ಅಧ್ಯಕ್ಷರೇ, ಅಲ್ಲಿಗೆ ಕೋರ್ಟ್ ಅಬ್ಸರ್ವೇಷನ್ಸ್‌ನಲ್ಲಿ principal subject of the Government, BDA proposal ಏನು ಇದೆ, ಅದನ್ನು ಅವರು ಕನ್‌ಕರ್ ಮಾಡಿದಂತಾಯಿತು. The principal question is colection of such tax, whether the BDA is competent ಎಂದು. ಪ್ರಾಸ್ಪೆಕ್ಟೀವ್ ಕೊಟ್ಟಿದ್ದರೂ ಕೂಡ ಪ್ರಿನ್ಸಿಪಲ್ ಸಬ್ಜೆಕ್ಟ್‌ನ್ನು ಅವರು ರೆಕಗ್ನೈಸ್ ಮಾಡಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ನಮಗೆ ಹಂಸಕ್ಷೀರ ನ್ಯಾಯ ಬೇಡ. ನಮಗೆ ಯಾವುದು ಅನುಕೂಲವೋ ಸುಪ್ರೀಂಕೋರ್ಟ್ ಅಪ್ ಹೆಲ್ಡ್ ಮಾಡಿಬಿಟ್ಟಿದೆ ಎಂದು ಹೇಳುವುದು. ನಮಗೆ ಯಾವುದು ಅನಾನುಕೂಲವೋ ಅಮೆಂಡ್ ಮೆಂಟ್ ತಂದಿದ್ದೇವೆ ಎಂದು ಹೇಳುವುದು. ಅದಲ್ಲ ಪ್ರಶ್ನೆ. ನಾನೂ ಕೂಡ ಅದನ್ನು ಓದಿದೆ. ನಾನು ಈಗ ಕಲೆಕ್ಟ್ ಮಾಡಬೇಡಿ ಎಂದು ಹೇಳಿದೆನೇ? ನಾನು ಹೇಳಲಿಲ್ಲ. ಪ್ರಶ್ನೆ ಇರುವುದು ನಿಮಗೆ ಯಾವಾಗ ಅಧಿಕಾರ ಇರಲಿಲ್ಲ ಆಗ ಕಲೆಕ್ಟ್ ಮಾಡಿದಿರಿ. ಎರಡೂ ಸಲ ಕಲೆಕ್ಟ್ ಮಾಡಿದ್ದು ತಪ್ಪು ಎಂದು ಹೇಳಿದರು. ಈಗ the right honourable course. ನಿಮಗೆ ಉಳಿದಿರುವುದು ಎಂದರೆ To-refund ನೀವು ಮುನಿಸಿಪಲ್ ಎಂದು ಈಗ ಹೇಳಿದಿರಿ. ಬಿಡಿಎ ಯಲ್ಲಿ ಯಾರಾದರೂ ಜನರಿಂದ ಆಯ್ಕೆಯಾದಂಥ ರೆಪ್ರೆಸೆಂಟೇಟೀವ್ಸ್ ಇದ್ದಾರೆಯೇ ಸ್ವಾಮಿ. ಬಿಡಿಎ ಹತ್ತಿರ ಹೋಗಿ ಅಹವಾಲನ್ನು ಹೇಳಿಕೊಳ್ಳುವುದಕ್ಕೆ? ಹೇಳಿ, ಯಾರ ಹತ್ತಿರ ತಮ್ಮ ಕಷ್ಟ ಹೇಳಿಕೊಳ್ಳಬೇಕು ಅವರು. ಯಾರಿಂದ ಮಾಡಿಸಿಕೊಳ್ಳಬೇಕು? ಇವೆಲ್ಲಾ ಬಹಳ ಚೆನ್ನಾಗಿರುತ್ತದೆ. ಏಕೆಂದರೆ you have to defend. The Health ಹೆಲ್ತ್ ಮಿನಿಸ್ಟರ್ has to defend the BDA Case. You are doing your best. But the thing is ಹೆಲ್ತ್ ಕಂಡೀಷನ್ ಅಷ್ಟು ಕೆಟ್ಟುಹೋಗಿ ಬಿಟ್ಟಿದೆ. ನೀವು ಏನು ಡಿಫೆಂಡ್ ಮಾಡುತ್ತೀರಿ? ಉತ್ತರ ಕೊಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸುರೇಶ್ ಕುಮಾರ್‌ರವರೇ, ಔಷಧಿ ಕೊಟ್ಟರೆ ಖಾಯಿಲೆ ವಾಸಿಯಾಗುತ್ತಿತ್ತು, ಹೆಲ್ತ್ ಇಂಪ್ರೂವ್ ಆಗುತ್ತಿತ್ತು ಎಂದರೆ ಏಖೆ ಕೊಡಬಾರದು? ಅದನ್ನು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಹೆಲ್ತ್ ಇಂಪ್ರೂವ್‌ಮೆಂಟ್ ಮಾಡುತ್ತಿದ್ದಾರೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, How it has been utilised, is also the next question.

SRI S. SURESHKUMAR: That is different. That you should have argued before the High Court. ಈಗ ಬಿಡಿಣ ನಲ್ಲಿ ಅಧಿಕಾರಿಗಳು ಇದ್ದಾರೆ ತಾನೇ ಸ್ವಾಮಿ. ಲೀಗಲ್ ಸೆಕ್ಷನ್ ಇದೆ ತಾನೇ ಸ್ವಾಮಿ. ಅವರಿಗೆಲ್ಲಾ ಸಂಬಳ ಕೊಡುವುದಿಲ್ಲವೇ? ಈ ಕೆಲಸವನ್ನು ಅವರ್ಯಾಕೆ ಮಾಡುವುದಿಲ್ಲ? Are they not paid. Are they not qualified to look into these things. ನಾವು ಮಾಡುವುದಕ್ಕೆ ಹಕ್ಕು ಇದೆಯೋ ಇಲ್ಲವೋ ಎಂಥ? ಅಧಿಕಾರ ಇದೆಯೋ ಇಲ್ಲವೋ ಎಂಥ? ಅವರು ಮಾಡಿದ ತಪ್ಪಿಗೆ ಆಗ ಕಲೆಕ್ಟ್ ಮಾಡಿಬಿಟ್ಟು ಈಗ ಕೊಡುವುದೇ ಇಲ್ಲ ಎಂದರೆ ಹೇಗೆ? ಅದೇ ನಾನು ಸೇಮ್ ಅನಾಲಜಿಯನ್ನು ಇಟ್ಟಿದ್ದು. ಅಪೆಕ್ಸ್ ಬ್ಯಾಂಕ್‌ದ್ದು ಅದೇ ನಾನು ಇಟ್ಟಿದ್ದು. ಇವರು ಹೇಳುತ್ತಿರುವುದು ಏನೆಂದರೆ ಮಾನ್ಯ ಕೃಷ್ಣಪ್ಪನವರೇ ನೀವು ಓದಿಲ್ಲ. ಇವರು ಹೇಳುತ್ತಿರುವುದೇನೆಂದರೆ in the circumstances, the apprehensions are that there will be innumerable requests for refund of tax in accordance with the Supreme Court judgement and it would be impossible for the B.D.A. to consider such request. ನಿಮಗೆ ಇಂಪಾಸಿಬಲ್ ಆದರೆ ಅದನ್ನು ಕಟ್ಟಿಕೊಂಡು ನನಗೇನು? ನನ್ನ ದುಡ್ಡು ನನಗೆ ಬರಬೇಕು ಅಷ್ಟೇ, ಅದಕ್ಕೆ ತಾವು ಉತ್ತರವನ್ನು ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ವಾರ್ತಾ ಸಚಿವರು) : ಮಾನ್ಯ ಅಧ್ಯಕ್ಷರೆ ಬಿಡಿಎರವರಿಗೆ ಹೇಳುವವರು ಯಾರು ಕೇಳುವವರು ಯಾರು, ಇದರ ಬಗ್ಗೆ ಸಾರ್ವಜನಿಕರು ಯಾರ ಹತ್ತಿರ ಹೋಗಿ ಹೇಳಿಕೊಳ್ಳಬೇಕೆಂದು ಮಾನ್ಯ ಸುರೇಶ್ ಕುಮಾರ್ ರವರು ಹೇಳುತ್ತಿದ್ದರು. ತಮ್ಮ ಕಾರ್ಪೊರೇಷನ್ ಪ್ರತಿನಿಧಿಗಳನ್ನು ಅಲ್ಲಿಗೆ ಕಳುಹಿಸುತ್ತೇವೆ, ಚುನಾಯಿತ ಪ್ರತಿನಿಧಿಗಳು ನಮ್ಮ ಬಿಡಿಎನ ಮೆಂಬರ್ ಆಗಿ ಇದ್ದಾರೆ ಅವರು ಕೆಲಸವನ್ನು ಮಾಡುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಿನಿಸ್ಟರ್ ಫಂಕ್ಷನ್ ಮಾಡುವುದು ಬೇರೆ, ಕಾರ್ಪೊರೇಷನ್ ರೆಪ್ರೆಸೆಂಟಿಟೀವ್ಸ್ ಇರುವುದು ಬೇರೆ. ನಾನೂ ಕೂಡ ಕಾರ್ಪೊರೇಷನ್‌ನಲ್ಲಿದ್ದವನು, ನೋಡಿಕೊಂಡು ಬಂದಿದ್ದೇನೆ, ಕಾರ್ಪೊರೇಷನ್ ಮೆಂಬರ್‌ಗೆ ಅಲ್ಲಿ ಏನು ಡ್ಯೂಟಿ ಎಂಬುದು ನನಗೆ ಗೊತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಈ ಎಲ್ಲಾ ಬಹುಶಃ ಈ ಬಿಡಿಎ ಬಂದಾದ ಮೇಲೆ ಬೆಂಗಳೂರು ಸುತ್ತಮುತ್ತ ಎಷ್ಟು ಬೆಳವಣಿಗೆಯಾಗಿದೆ, ಎಷ್ಟು ಅಭಿವೃದ್ಧಿಯಾಗಿದೆ ಎನ್ನತಕ್ಕಂಥದನ್ನು ನಾವು ಒಟ್ಟಾರೆಯಾಗಿ ಗಮನಿಸಿದರೆ, ಆ ಬಿಡಿಎಗೆ ಇರತಕ್ಕಂತಹ ಸಂವೇದನಾಶೀಲತೆ ಇದೆಯಲ್ಲಾ ಅದನ್ನು ತಾವು ಮೆಚ್ಚಬೇಕಾಗಿತ್ತು. ಅದರ ಬದಲಾಗಿ ನೀವು ಟೀಕೆ ಮಾಡತಕ್ಕದ್ದು ಸರಿಯಲ್ಲ. ಇಲ್ಲಿ ನಾಗರೀಕ ಸೌಲಭ್ಯಗಳನ್ನು, ಬೆಂಗಳೂರು ಅದರ ಸುತ್ತಮುತ್ತ ಎಂದು ತಾವು ಹೇಳಿದ್ದೀರಿ. ಈ ಬಿಡಿಎ ಮಾಡಿರತಕ್ಕಂಥ ಎಲ್ಲಾ ಅಭಿವೃದ್ಧಿ ಕಾರ್ಯಗಳು ಕೂಡ ಸರ್ಕಾರ ನೋಟಿಫೈ ಮಾಡಿರತಕ್ಕಂಥ ಪ್ರದೇಶದಲ್ಲಿಯೇ ಆಗಿದೆ. ಆ ನೋಟಿಫೈ ಆದಮೇಲೆ ಅಭಿವೃದ್ಧಿಯಾದ ಮೇಲೆ ಅದನ್ನು ಕಾರ್ಪೊರೇಷನ್‌ಗೆ ಆದರೂ ಕೊಡಬಹುದು, ಆಕಸ್ಮಾತ್ ಅದು ಮುನಿಸಿಪಾಲಿಟಿಯ ವ್ಯಾಪ್ತಿಗೆ

ಬಂದರೆ ಅಲ್ಲಿಯೂ ಕೊಡಬಹುದು. ಆದರೆ ಮಾನ್ಯ ಸದಸ್ಯರು ಒಂದನ್ನು ತಾವು ಗ್ರಹಿಸಬೇಕೆಂದರೆ ಯಾವ ಪ್ರದೇಶದಲ್ಲಿ ನೋಟಿಫೈಡ್ ಆಗಿರುವ ಪ್ರದೇಶದಲ್ಲಿ ಪ್ರಾಧಿಕಾರದವರು ಅಭಿವೃದ್ಧಿಯನ್ನು ಮಾಡಿದೆಯೋ ಆ ಪ್ರದೇಶಕ್ಕೆ ಸರ್ವರೀತಿಯಾದಂತಹ ನಾಗರೀಕ ಸೌಲಭ್ಯಗಳನ್ನು ಬಿಡಿಎ ಹಣದಿಂದ ಅದರ ಫಂಡ್‌ನಿಂದ ಕೊಟ್ಟು ಖರ್ಚು ಮಾಡಿದ್ದಾರೆ. ಆ ನಾಗರೀಕ ಸೌಲಭ್ಯಗಳನ್ನು ಅನುಭವಿಸುತ್ತಿರುವಂತಹ ಜನರು ಈ ತೆರಿಗೆಯನ್ನು ಕಟ್ಟಿದ್ದಾರೆ. ಇವತ್ತು ರೀಫಂಡ್ ಎಂದರೆ, ನೀವು ನೀರನ್ನು ತೆಗೆದುಕೊಂಡಿದ್ದೀರಿ, ಲೈಟನ್ನು ತೆಗೆದುಕೊಂಡಿದ್ದೀರಿ, ರಸ್ತೆಯನ್ನು ತೆಗೆದುಕೊಂಡಿದ್ದೀರಿ, ಟಾರ್ ರಸ್ತೆಯನ್ನು ಹಾಕಿಕೊಂಡಿದ್ದೀರಿ, ಎಲ್ಲಾ ನಾಗರೀಕ ಸೌಲಭ್ಯಗಳನ್ನು ಉಪಯೋಗಿಸಿದ ಮೇಲೆ ಇವತ್ತು ವಾಪಸ್ಸು ಕೊಡಿ ಎಂದು ಕೇಳಿದರೆ ಆಗ ನಾವು ಮಾಡಿರತಕ್ಕಂಥ ಕೆಲಸವನ್ನು ವಾಪಸ್ಸು ಕೊಡುವುದಕ್ಕಾಗುತ್ತದೆಯೇ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಎಷ್ಟು ಅಮೌಂಟನ್ನು ಕೊಡಬೇಕಾಗುತ್ತದೆ ಎಂಬುದನ್ನು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ : 17 ಕೋಟಿ ರೂಪಾಯಿಗಳು ಸಂಗ್ರಹಣೆಯಾಗಿದೆ. ನಾವು ಮಾಡಿರತಕ್ಕಂಥ ನಾಗರೀಕ ಸೌಲಭ್ಯಗಳನ್ನು ಖರ್ಚು ಮಾಡಿರತಕ್ಕಂಥ ಹಣ ಅದನ್ನು ಸಂಗ್ರಹಣೆ ಮಾಡುವುದಕ್ಕೋಸ್ಕರ ತೆರಿಗೆಯನ್ನು ಹಾಕಿದ್ದೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಎಷ್ಟು ಜನರು ಕ್ಲೈಮ್ ಮಾಡಿದ್ದಾರೆ, ಎಷ್ಟು ಅಮೌಂಟನ್ನು ಕೊಡಬೇಕಾಗುತ್ತದೆ. ಅಷ್ಟಾದರೂ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ಕ್ಲೈಮ್ ಮಾಡುವುದು ಬಿಡುವುದು ಬೇರೆ ಅದು ಅಪ್ರಸ್ತುತ. ನಾವು ತೆರಿಗೆಯನ್ನು ಹಾಕಿ ವಸೂಲಿಯನ್ನು ಮಾಡಿದ್ದೇವೆ. ಕಾನೂನಿನಲ್ಲಿ ಅಳವಡಿಸಿಕೊಂಡಿಲ್ಲ ಎಂಬ ಒಂದೇ ಕಾರಣಕ್ಕಾಗಿ, ಈ ಪ್ರಶ್ನೆ ಉದ್ಭವವಾಗಿದೆ, ಸುಪ್ರಿಂಕೋರ್ಟಿನಲ್ಲೂ ಆಗಿದೆ. ಆದರೆ ಕಾನೂನನ್ನು ತಂದು ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ ಎನ್ನತಕ್ಕಂಥದನ್ನು ಅದೇ ಸುಪ್ರಿಂಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ, ಅದಕ್ಕೋಸ್ಕರ ನಾವು ಇದನ್ನು ತದಿರತಕ್ಕಂಥ ತಿದ್ದುಪಡಿಯೂ ಕೂಡ inherent power of the Government to bring a legislation. Therefore, we have come forward with an amendment Act to see that whatever we have collected is legalised. ಅಷ್ಟೇ ಮಾಡಿರತಕ್ಕದ್ದು ಇದರಲ್ಲಿ ಏನೂ ಇಲ್ಲ. ಇದರಲ್ಲಿ ಆಶ್ಚರ್ಯಪಡಬೇಕಾದುದು ಏನೂ ಇಲ್ಲ, ನಾವು ಮಾಡಿರತಕ್ಕಂಥ ಸೇವೆಗೆ ಪ್ರತಿಯಾಗಿ ತೆರಿಗೆಯನ್ನು ಸಂಗ್ರಹಣೆ ಮಾಡಿರುವುದು, ಆದ್ದರಿಂದ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ನಾವು ನೀರು ಮತ್ತು ರಸ್ತೆಯನ್ನು ಕೊಟ್ಟಿಲ್ಲವೆಂದು ತಾವು ಹೇಳಿದ್ದೀರಿ. ನೀವು ಯಾವತ್ತಾದರೂ ಬಿಡಿಎ ರಸ್ತೆಯಲ್ಲಿ ನೀವು ನಡೆದುಕೊಂಡು ಹೋಗಿದ್ದೀರಾ? 10 ರಿಂದ 14 ವರ್ಷಗಳು ನಾನು ರಾಜಾಜಿನಗರದ ಬಗ್ಗೆ ಮಾತನಾಡುವುದಿಲ್ಲ, ನಾನು ಇಡೀ ರಾಜ್ಯದವನು, ನೀರಿಲ್ಲದೆ, ಸ್ಯಾನಿಟರಿ ಕಲೆಕ್ಷನ್ ಇಲ್ಲದೆ, ರಸ್ತೆಯಿಲ್ಲದೆ ಪರದಾಡುವುದು ಎಲ್ಲರಿಗೂ ಕೂಡ ಗೊತ್ತಿದೆ. for no fault of theirs. ನಾನೇ ಅನೇಕ ಜನರನ್ನು ಬಿಡಿಎ ಕಮೀಷನರ್‌ರವರ ಹತ್ತಿರ ಕರೆದುಕೊಂಡು ಹೋಗಿ ಈ ಸ್ಥಿತಿ ಇದೆ ಎಂದು ಹೇಳಿಸಿದ್ದೇನೆ, ಹೌದು ಅದನ್ನು ಮಾಡುವುದಕ್ಕಾಗಿಲ್ಲ ನಾವು ಬೇರೆ

ಅಲ್ಟರ್‌ನೇಟೀವ್ ಕೊಡುತ್ತೇನೆಂದು ಹೇಳಿದರು. ಅಲ್ಲಿ ಸಂವೇದನಾಶೀಲತೆಯನ್ನು ತೋರಿಸಿದ್ದೀರಿ, ಯಾವುದೋ ಇಂಡಿವಿಜಿಯಲ್ ಕೇಸ್‌ನಲ್ಲಿ. ಇಲ್ಲಿ ನಾನು ಸಂವೇದನಾಶೀಲತೆಯನ್ನು ಹೇಳುತ್ತಿರುವುದು, ನಾಗರೀಕರ ದುಡ್ಡು, ನೀವು ಹೇಳುವ ಪ್ರಕಾರ 17 ಕೋಟಿ ರೂಪಾಯಿಗಳು, ಅದು ಈಗ ಬಿಡಿಎಗೆ paltry sum. They have with them Rs. 150-160 crores and they want to invest in infrastructure in Bangalore.

ಶ್ರೀ ಕಾಗೋಡು ತಿಮ್ಮಪ್ಪ : ಇನ್ಫ್ರಾಸ್ಟ್ರಕ್ಚರ್, ಯಾರು? ಸ್ವಂತ ಆಸ್ತಿ ಮಾಡುವುದಕ್ಕೆ ಹೋಗುತ್ತಾರಾ? ಒಂದು ಊರು ಬೆಳೆಯಬೇಕಾದರೆ ಸುಮ್ಮನೆ ಬೆಳೆಯುತ್ತದೆಯೇ?

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಸ್ವಾಗತಿಸುತ್ತೇನೆ. ಒಂದು ಊರು ಬೆಳೆಯುತ್ತದೆಂದರೆ, ನಿಮಗೆ ಅಧಿಕಾರ ಇಲ್ಲದೆ ಇದ್ದರೂ ಟ್ಯಾಕ್ಸ್‌ನ್ನು ಹಾಕಿಬಿಡಬಹುದಾ? ಈ ಸದನ ಪೋಸ್ಟ್ ಮಾರ್ಟಮ್ ಸೆಂಟರ್ ಆಗಬಾರದು, ನಾವೇನೂ ತಪ್ಪು ಮಾಡಿದೆವು ಅಂತ,

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸುರೇಶ್ ಕುಮಾರ್‌ರವರೆ, ಪೋಸ್ಟ್ ಮಾರ್ಟಮ್ ಅಲ್ಲ, ಅನೇಕ ಸಂದರ್ಭಗಳಲ್ಲಿ ಕಾನೂನನ್ನು ತಂದು, ಇರತಕ್ಕಂಥ ಕಾನೂನಿಗೆ ತಿದ್ದುಪಡಿಯನ್ನು ಮಾಡಿ, ಕೆಲವು ಕೋರ್ಟಿನ ತೀರ್ಮಾನಗಳನ್ನು ಇನ್ ವ್ಯಾಲಿಡೇಟ್ ಮಾಡತಕ್ಕಂತಹ ಪ್ರಸಂಗಗಳು ಇದ್ದಾವೆ that is the inherent power of the Government.

SRI S.P. MUDDAHANUMEGOWDA: You will agree with me Mr. Suresh Kumar that the tax was collected with good intention. ಹೌದಾ? Now we want to legalise the action which was done with good intention. you must understand that.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಮುದ್ದಹನುಮೇಗೌಡರೆ, ಒಂದು ನಿಮಿಷ, ನರ್ಸಿಂಗ್ ಹೋಂಗಳಲ್ಲಿ ಗುಡ್ ಇಂಟೆನ್‌ಷನ್‌ನಲ್ಲಿ ಆಪರೇಷನ್ ಮಾಡುತ್ತಾರೆ. ಅವನು ಸತ್ತುಹೋಗುತ್ತಾನೆ, ಅವನ ಬಂಧುಬಳಗದವರೆಲ್ಲರೂ ಸೇರಿಕೊಂಡು ಎನ್ ಕ್ವಯರಿ ಮಾಡಬೇಕು, ಸತ್ತು ಹೋದಾ ಎಂದು ಕೇಳುವುದಾ? ಗುಡ್ ಇಂಟೆನ್‌ಷನ್ ಅಲ್ಲಾ ಪ್ರಶ್ನೆ.

SRI S.P. MUDDAHANUMEGOWDA: If there is no negligence on the part of the Doctor, you must appreciate his attempt. atleast ಅವನು ಸತ್ತುಹೋದ ಎಂಬ ಒಂದೇ ಕಾರಣಕ್ಕಾಗಿ you cannot blame the Doctor if there is no fault on his part.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಮುದ್ದಹನುಮೇಗೌಡರು ಜ್ಯುಡಿಷಿಯಲ್ ಆಫೀಸರ್ ಆಗಿದ್ದರು, ಅವರು ಹೈಕೋರ್ಟ್ ಸಿಂಗಲ್ ಜಡ್ಜನ್ನು, ಹೈಕೋರ್ಟ್ ಡಿವಿಜನ್ ಬೆಂಚ್‌ನ್ನು ಸುಪ್ರಿಂಕೋರ್ಟ್ ಎಸ್.ಎಲ್.ಪಿಯಲ್ಲಿ ಯಾರು ಜಡ್ಜಮೆಂಟ್‌ಗೆ ಕುಳಿತಿದ್ದರು ಅವರ ಮಾತನ್ನು ಕೂಡ you should also agree with them. ಅವರು ಏನು ಹೇಳಿರುವುದೆಂದರೆ, ನಿಮಗೆ ಗೊತ್ತೇ ಇರಲಿಲ್ಲ, ನೀವು ಕಲೆಕ್ಟ್ ಮಾಡಿದ್ದೀರಿ, 17 ಕೋಟಿ ರೂಪಾಯಿಗಳಿಗೋಸ್ಕರ ಒಂದು ತಿದ್ದುಪಡಿಯನ್ನು ತರುವುದು ಸರ್ಕಾರಕ್ಕೆ ಏನಂತ ಹೇಳಬೇಕು? ಮೂರ್ಖತನವೆಂದು ಹೇಳಬೇಕು ಅಷ್ಟೆ. ಜನವಿರೋಧಿ ಎಂದು ಹೇಳಬೇಕಾಗುತ್ತದೆ ಅಷ್ಟೆ.

ಅಧ್ಯಕ್ಷರು : ಮಾನ್ಯ ಸುರೇಶ್‌ಕುಮಾರ್, ಆಯಿತು ಬಿಡಿ.

SRI S. SURESH KUMAR: I am asking a very very valid question. ನಾವು ದುಡ್ಡು ಕೊಡುವುದಕ್ಕಾಗುವುದಿಲ್ಲ, ಅದಕ್ಕೋಸ್ಕರ ಈ ತಿದ್ದುಪಡಿ ಎಂದರೆ ಏನರ್ಥ?

MR. SPEAKER: You opposed the Bill.

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರು, ಮಾನ್ಯ ಸುರೇಶ್‌ಕುಮಾರ್‌ರವರು ಹೈಕೋರ್ಟ್ ಜಡ್ಜಮೆಂಟ್, ಸುಪ್ರೀಂಕೋರ್ಟ್ ಜಡ್ಜಮೆಂಟ್ ಹೇಳುತ್ತಾರೆ, ಕೋರ್ಟ್ ಜಡ್ಜಮೆಂಟ್‌ಗಳು, ಬೈಬಲ್ ಅಲ್ಲ, ಖುರಾನ್‌ಗಳಲ್ಲ, ಅವರು ಯಾವ ಯಾವ ಜಡ್ಜಮೆಂಟ್‌ಗಳನ್ನು ಕೊಡುತ್ತಾರೆ, ನಮ್ಮ ಕಾನೂನಿನಲ್ಲಿ ಲೋಪದೋಷಗಳೇನಾದರು, ಇದ್ದಾಗ ಅದಕ್ಕೆ ಜಡ್ಜಮೆಂಟನ್ನು ಕೊಡುತ್ತಾರೆ. ಆ ಕಾನೂನನ್ನು ತಿದ್ದುಪಡಿ ಮಾಡುವಂತಹ ಅಧಿಕಾರ ಸರ್ಕಾರಕ್ಕೆ ಇದೆ.

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು): ಮೊನ್ನೆ ಎಲೆಕ್ಷನ್ ರಿಫಾರ್ಮ್ಸ್‌ರವರು ಮಾಡಿಲ್ಲವೇ? ಸೆಂಟ್ರಲ್ ಗೌರ್ನಮೆಂಟ್ ಎಲೆಕ್ಷನ್ ರಿಫಾರ್ಮ್ ಮಾಡಿಲ್ಲವೇ? ಅದರಲ್ಲಿ ಸುಪ್ರಿಕೋರ್ಟಿನವರು ಡಿಸಿಷನ್‌ನ್ನು ಕೊಟ್ಟರು. ಆಸೆಟ್ಸ್ ಡಿಕ್ಲೇರ್ಡ್ ಮಾಡಬೇಕು ಮತ್ತೊಂದನ್ನು ಮಾಡಬೇಕೆಂದು, ಆಗ ಗೌರ್ನಮೆಂಟ್ ಆಫ್ ಇಂಡಿಯಾದವರು ಎಲ್ಲಾ ಅಪೋಜಿಷನ್ ಲೀಡರ್ಸ್‌ಗಳ ಮೀಟಿಂಗನ್ನು ಕರೆದು ಏನು ಸುಪ್ರೀಂಕೋರ್ಟಿನವರು ಡಿಸಿಷನ್‌ನ್ನು ತೆಗೆದುಕೊಂಡರು ಅದನ್ನು ಇಂಪ್ಲಿಮೆಂಟ್ ಮಾಡಿದರೆ ತೊಂದರೆಯಾಗುತ್ತದೆಂದು ಹೇಳಿ ನಿರ್ಣಯ ತೆಗೆದುಕೊಂಡಿದ್ದಾರಲ್ಲವೇ? ಹಾಗಾಗಿ ತಾವು ಬಹಳ ಜವಾಬ್ದಾರಿ ಸ್ಥಾನದಲ್ಲಿದ್ದೀರಿ. ತಮಗೆ ಬೆಂಗಳೂರು ಸಿಟಿಯ ಬಗ್ಗೆ ಹೆಚ್ಚಿನ ಕಳಕಳಿಯಿದೆ. ಬೆಂಗಳೂರು ಸಿಟಿಯ ಮೇಲೆ ಏನು ಬರ್ಡನ್ ಬರುತ್ತಿದೆ ಎನ್ನುವುದು ನಿಮಗೆ ಗೊತ್ತು, ಇವತ್ತು 150 ಕೋಟಿ ರೂ.ಗಳು ಇದೆಯೆಂದು ಹೇಳುತ್ತೀರಲ್ಲಾ It is a paltry sum, Bangalore require infrastructure ಅದು mono rail ಇರಬಹುದು ಫ್ಲೈ ಓವರ್ಸ್ ಇರಬಹುದು, ರಿಂಗ್ ರೋಡ್ ಇರಬಹುದು, because the burden is increased now.

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೆ, ಈಗ ಚರ್ಚೆಯು ಮುಗಿಯಿತು.

ಶ್ರೀ ಎಸ್. ಸುರೇಶ್ ಕುಮಾರ್ : ಅದನ್ನೆಲ್ಲವನ್ನೂ ಮಾಡಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ಬಿಡಿಎನವರು ಮಾಡುತ್ತಿರುವಂತಹ ಕೆಲಸವನ್ನು ನಾನು ಒಪ್ಪಿಕೊಂಡು ಬಿಡಬ್ಲ್ಯೂ ಎಸ್‌ಎಸ್‌ಬಿ ಚರ್ಚೆಯ ಮೇಲೆ ಮಾತನಾಡುವಾಗಲೇ ಹೇಳಿದ್ದೇನೆ. ಒಂದು ನಾನು ಬಿಡಿಎ ಉತ್ತಮ ಸಂಸ್ಥೆ ನಾವು ಅಲ್ಲ ಸರ್ಟಿಫಿಕೇಟನ್ನು ಕೊಡುವುದು. ಇಕ್ರಾನ್ ಎಂಬ ಸಂಸ್ಥೆ ಇವತ್ತು ಒಂದು ಸರ್ಟಿಫಿಕೇಟನ್ನು ಕೊಟ್ಟಿದೆ. ಪ್ರಶ್ನೆ ಇರುವುದು ಅದಲ್ಲ. ಈಗ ಮಾಡುತ್ತಿರುವಂತಹ ಕೆಲಸ ಹಿಂದಿನದನ್ನು ವ್ಯಾಲಿಡೇಟೆಡ್ ಮಾಡುವುದಕ್ಕಾಗುವುದಿಲ್ಲ, ನನ್ನ ಅಭಿಪ್ರಾಯ ನಾನು ಹೇಳುತ್ತೇನೆ. ನಾನು ಗಿಣಿಗೆ ಹೇಳುವ ಹಾಗೆ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಅದೇ ತಪ್ಪು ಮಾಡುತ್ತಿರುವುದು, ನಾನು ಸರ್ಕಾರ ಕೇಳುವ ಹಾಗೆ ಹೇಳಬೇಕು. ನಾನು ಹೇಳುತ್ತಿರುವುದೇನೆಂದರೆ, 17 ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ ಎನ್ನುವುದಕ್ಕೋಸ್ಕರ ಈ ಒಂದು ತಿದ್ದುಪಡಿಯನ್ನು ತಂದಿರುವುದು ಯಾವುದೇ ರೀತಿ ಬುದ್ಧಿವಂತಿಕೆಯ ಲಕ್ಷಣವಲ್ಲ. ದಯವಿಟ್ಟು ಯಾರು

ವಾರಸುದಾರರು ಇದ್ದಾರೆ, ಆ ದುಡ್ಡನ್ನು ವಾಪಸ್ಸು ಕೊಟ್ಟು ನ್ಯಾಯಾಲಯದ ಬಗ್ಗೆ ನಿಮಗೆ ಗೌರವವಿದೆ ಎನ್ನುವುದನ್ನು ತೋರಿಸಿ. ಇದು ಜನವಿರೋಧಿ ತಿದ್ದುಪಡಿ, ಸುಪ್ರಿಂಕೋರ್ಟ್ ಮತ್ತು ಹೈಕೋರ್ಟಿಗೆ ತಲೆಯನ್ನು ಬಾಗದೆ, ಆ ಹೈಕೋರ್ಟ್ ತಿರಸ್ಕಾರ ಮಾಡಿರುವಂತಹ ತಿದ್ದುಪಡಿ, ಈ ತಿದ್ದುಪಡಿಯನ್ನು ಮಾಡುವಾಗ ನಾನು ಬೆಂಗಳೂರು ಶಾಸಕನಾಗಿ ಭಾಗವಹಿಸುವುದಕ್ಕಾಗುವುದಿಲ್ಲ, ಇದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸುರೇಶ್ ಕುಮಾರ್‌ರವರು ಈ ಹಂತದಲ್ಲಿ ಸಭಾತ್ಯಾಗವನ್ನು ಮಾಡಿದರು)

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ "2002ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 5 ರವರೆಗೆ, ಎರಡೂ ಸೇರಿದಂತೆ,

ಅಧ್ಯಕ್ಷರು : "ಖಂಡ 2 ರಿಂದ 5 ರವರೆಗೆ, ಎರಡೂ ಸೇರಿದಂತೆ, ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 5 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಈ ತಿದ್ದುಪಡಿಗೆ ನಾನು ವಿರೋಧ ಮಾಡಿದ್ದೇನೆ. ಇದನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಶ್ರೀ ಕೆ.ಎನ್. ಸುಬ್ಬಾರೆಡ್ಡಿಯವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು)

ಪ್ರಸ್ತಾವದ ಅಂಗೀಕಾರ

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಮತ್ತು ವಾರ್ತಾ ಸಚಿವರು) : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಪರವಾಗಿ "2002ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2002ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.